ಭರಿಸಬೇಕಾಗಿತ್ತು. ಕೆಲವೊಂದು ಫಲಾನುಭವಿಗಳು ಬಹಳ ಕಷ್ಟದಲ್ಲಿದ್ದು ಇವರುಗಳು ವಿದ್ಯುದ್ದೀಕರಣ ವೆಚ್ಚವನ್ನು ಭರಿಸಲು ಸಾಧ್ಯವಿಲ್ಲವೆಂಬುದನ್ನು ಅರಿತು, ಸರ್ಕಾರವು ಫಲಾನುಭವಿಗಳು ಭರಿಸಬೇಕಾದ ಠೇವಣಿ ಮೊತ್ತವನ್ನು ಸರ್ಕಾರದಿಂದ ಭರಿಸಲು ಈ ನಿಗಮಕ್ಕೆ ರೂ.62.86 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತಾರೆ. ಸದರಿ ಮೊತ್ತವನ್ನು ಕೆ.ಪಿ.ಟಿ.ಸಿ.ಎಲ್.ಗೆ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಈ) <u>ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ</u> :-

2006-07ನೇ ಸಾಲಿನಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 451 ಕೊಳವೆಬಾವಿಗಳನ್ನು ಕೊರೆಯಲು ಗುರಿ ನೀಡಲಾಗಿದ್ದು, ಅದರಂತೆ ಕಾರ್ಯ ಪ್ರಗತಿಯಲ್ಲಿದೆ.

<u>ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ :-</u>

2006-07ನೇ ಸಾಲಿಗೆ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆಯಲ್ಲಿ ಚಾಮರಾಜನಗರ ಜಿಲ್ಲೆಗೆ ವೈಯಕ್ತಿಕ ನೀರಾವರಿ ಯೋಜನೆಯಲ್ಲಿ 67 ಕೊಳವೆ ಬಾವಿಗಳನ್ನು ಹಾಗೂ ಸಾಮೂಹಿಕ ಯೋಜನೆಯಲ್ಲಿ 8 ಘಟಕಗಳಲ್ಲಿ 16 ಕೊಳವೆ ಬಾವಿಗಳು ಸೇರಿ ಒಟ್ಟು 83 ಕೊಳವೆ ಬಾವಿಗಳಿಗೆ ಮಂಜೂರಾತಿ ನೀಡಲಾಗಿದೆ.

<u>ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ</u> :-

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ 2006-07ನೇ ಸಾಲಿಗೆ ಚಾಮರಾಜನಗರ ಜಿಲ್ಲೆಗೆ 100 ಕೊಳವೆಬಾವಿಯನ್ನು ಕೊರೆಯಲು ಗುರಿಯನ್ನು ಹಮ್ಮಿಕೊಳ್ಳಲಾಗಿದೆ.

2054 (2524) ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ರಾಜ್ಯಾದ್ಯಂತ ಸ್ವಯಂ ಉದ್ಯೋಗ ಯೋಜನೆಯಡಿ ನೀಡಲಾಗುತ್ತಿರುವ ಸೌಲಭ್ಯಗಳೇನು;

ಆ) ಎಷ್ಟು ವಿದ್ಯಾವಂತ ನಿರುದ್ಯೋಗಿಗಳಿಗೆ ಇದುವರೆಗೂ ಸದರಿ ಯೋಜನೆಯಡಿ ಸ್ವಯಂ ಉದ್ಯೋಗ ಕೈಗೊಳ್ಳಲು ಸಾಲ ಸೌಲಭ್ಯ ಒದಗಿಸಲಾಗಿದೆ;

ಇ) ಸ್ವಯಂ ಉದ್ಯೋಗ ಯೋಜನೆಯಡಿ ಸಾಲ ಸೌಲಭ್ಯ ಪಡೆಯಲು ಇದುವರೆಗೂ ಬಂದಿರುವ ವಿದ್ಯಾವಂತ ನಿರುದ್ಯೋಗಗಳ ಅರ್ಜಿಗಳೆಷ್ಟು;

ಈ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯಲ್ಲಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಶ್ರೀ ಬಾಲಚಂದ್ರ.ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :-

ಅ) 1. ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ :-

ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮವು ಸ್ವಯಂ ಉದ್ಯೋಗ ಯೋಜನೆಯಡಿ ಈ ಕೆಳಕಂಡ ವಿಧಗಳಲ್ಲಿ ಸೌಲಭ್ಯಗಳನ್ನು ಒದಗಿಸುತ್ತಿದೆ.

ಅ. ಸ್ವಯಂ ಉದ್ಯೋಗ ಯೋಜನೆ

ಆ. ಐ.ಎಸ್.ಬಿ. ಯೋಜನೆ

ಇ. ನೇರ ಸಾಲ ಯೋಜನೆ

ಈ. ಮೈಕ್ರೋ ಕ್ರೆಡಿಟ್ ಯೋಜನೆ

ಈ ಯೋಜನೆಗಳಡಿ ಬ್ಯಾಂಕುಗಳು, ಸ್ವಯಂ ಸೇವಾ ಸಂಘಗಳು ಹಾಗೂ ರಾಷ್ಟ್ರೀಯ ಹಣಕಾಸು ಅಭಿವೃದ್ಧಿ ನಿಗಮಗಳ ಸಹಯೋಗದೊಂದಿಗೆ ಈ ಕೆಳಕಂಡ ಉದ್ದೇಶಗಳಿಗೆ ಸೌಲಭ್ಯ ಒದಗಿಸಲಾಗುತ್ತಿದೆ.

ಹೈನುಗಾರಿಕೆ, ಹಂದಿಸಾಕಾಣಿಕೆ, ಎತ್ತುಗಾಡಿ, ಸೈಕಲ್ ಷಾಪ್, ಸಣ್ಣ ಕೈಗಾರಿಕೆ, ಸೇವೆ ಮತ್ತು ವ್ಯಾಪಾರ, ಅಟೋರಿಕ್ಷಾ, ಹಿಟ್ಟಿನ ಗಿರಣಿ, ರೆಡಿಮೇಡ್ ಗಾರ್ಮೆಂಟ್ಸ್, ಎಲೆಕ್ಟ್ರಿಕಲ್ ಷಾಪ್, ಟಾಟಾ ಇಂಡಿಕಾ, ಟ್ರಾಕ್ಟರ್ ಇತ್ಯಾದಿ.

2. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ :-

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಸಂಕ್ಷಿಪ್ತ ಮಾಹಿತಿಯನ್ನು ಅನುಬಂಧ –1 ರಲ್ಲಿ ಕೊಡಲಾಗಿದೆ.

3. <u>ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ</u> :-

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಚಾಮರಾಜನಗರ ಜಿಲ್ಲೆಯು ಸೇರಿದಂತೆ ರಾಜ್ಯಾದ್ಯಂತ ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಕಲ್ಪಿಸಲಾಗುತ್ತಿರುವ ಸೌಲಭ್ಯಗಳು ಇಂತಿವೆ.

"ಸ್ವಾವಲಂಬನ" ಸಾಲದ ಯೋಜನೆಯಡಿಯಲ್ಲಿ ಬ್ಯಾಂಕ್/ಇತರ ಹಣಕಾಸು ಸಂಸ್ಥೆಗಳ ಮೂಲಕ ಘಟಕ ವೆಚ್ಚ ರೂ.1.00 ಲಕ್ಷಗಳ ವರೆವಿಗೆ ಅಲ್ಪಸಂಖ್ಯಾತ ಫಲಾನುಭವಿಗಳು ಕೈಗೊಳ್ಳಬಹುದಾದಂತಹ ಯೋಜನೆಗಳಿಗೆ ಸಾಲ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ. ಈ ಯೋಜನೆಯಡಿಯಲ್ಲಿ ಘಟಕ ವೆಚ್ಚ ರೂ.25,000 ಗಳವರೆವಿಗೆ ಸಹಾಯಧನ ರೂ.5,000ಗಳನ್ನು ನಿಗಮದಿಂದ ಬಿಡುಗಡೆ ಮಾಡಲಾಗುತ್ತದೆ, ಬಾಕಿ ಮೊತ್ತವನ್ನು ಬ್ಯಾಂಕ್‌ನಿಂದ ಸಾಲ ಒದಗಿಸಲಾಗುವುದು. ಘಟಕ ವೆಚ್ಚ ರೂ.25,000 ಗಳಿಂದ ರೂ.1.00 ಲಕ್ಷಗಳವರೆಗೆ ಇದ್ದಲ್ಲಿ, ಮಾರ್ಜಿನ್ ಹಣ ಸಾಲ ಶೇ.20 ರಷ್ಟು ಹಾಗೂ ಸಹಾಯಧನ ಗರಿಷ್ಠ ರೂ.5,000 ಗಳವರೆವಿಗೆ ನಿಗಮದಿಂದ ಪಾವತಿಸಲಾಗುವುದು. ಉಳಿಕೆ ಮೊತ್ತ ಗರಿಷ್ಟ ರೂ.75,000 ಗಳವರೆಗೆ ಸಾಲವನ್ನು ಬ್ಯಾಂಕ್/ಇತರೆ ಹಣಕಾಸು ಸಂಸ್ಥೆಗಳು ಬಿಡುಗಡೆ ಮಾಡುತ್ತವೆ, ನಿಗಮದಿಂದ ಬಿಡುಗಡೆ ಮಾಡುವ ಮಾರ್ಜಿನ್ ಹಣಕ್ಕೆ ಶೇ.7ರಷ್ಟು ಬಡ್ಡಿಯನ್ನು ವಿಧಿಸಲಾಗುತ್ತದೆ. ಬ್ಯಾಂಕ್‌ನಿಂದ ಬಿಡುಗಡೆಯಾಗುವ ಸಾಲದ ಹಣಕ್ಕೆ ಚಾಲ್ತಿಯಲ್ಲಿರುವ ಬಡ್ಡಿಯನ್ನು ವಿಧಿಸುತ್ತಾರೆ.

ಆ) <u>1. ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ</u> :-

ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು ವಿದ್ಯಾವಂತ ನಿರುದ್ಯೋಗಿಗಳಿಗೆ ಇದುವರೆವಿಗೂ ಈ ಯೋಜನೆಯಡಿ ಸ್ವಯಂ ಉದ್ಯೋಗ ಕೈಗೊಳ್ಳಲು 4,90,030 ಜನರಿಗೆ ಸೌಲಭ್ಯ ಒದಗಿಸಲಾಗಿದೆ.

<u>2. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ :-</u>

ನಿಗಮವು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳಲ್ಲಿ 2006-07ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾದ ಗುರಿ ಹಾಗೂ ಒದಗಿಸಲಾದ ಸೌಲಭ್ಯದ ಯೋಜನಾವಾರು ಪ್ರಗತಿ ತಃಖ್ತೆಯನ್ನು ಅನುಬಂಧ-2ರಲ್ಲಿ ಕೊಡಲಾಗಿದೆ.

3. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ :-

2006-07ನೇ ಸಾಲಿನಲ್ಲಿ ಸ್ವಾವಲಂಬನ ಸಾಲದ ಯೋಜನೆಯಡಿಯಲ್ಲಿ 9160 ಜಲ ಅಲ್ಪಸಂಖ್ಯಾತ ಫಲಾನುಭವಿಗಳಿಗೆ ಸಾಲ ಸೌಲಭ್ಯವನ್ನು ಒದಗಿಸಲಾಗಿದೆ.

ಇ) 1. ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ :-

ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು 2006-07ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ಯೋಜನೆಯಡಿ ಒಟ್ಟು 85,242 ಅರ್ಜಿಗಳು ಬಂದಿವೆ.

2. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ :-

2006-07ನೇ ಸಾಲಿನಲ್ಲಿ ನಿಗಮದ ವಿವಿಧ ಯೋಜನೆಗಳಲ್ಲಿ ಒಟ್ಟು 49602 ಅರ್ಜಿಗಳು ಬಂದಿರುತ್ತವೆ.

3. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ :-

2006-07ನೇ ಸಾಲಿನಲ್ಲಿ 22,980 ಅರ್ಜಿಗಳನ್ನು ಸ್ವೀಕರಿಸಲಾಗಿದೆ.

ಈ) 1. ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ :-

ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮವು 2006-07ನೇ ಸಾಲಿನಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 1988 ಅರ್ಜಿಗಳ ಬಂದಿವೆ.

2. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ :-

2006-07ನೇ ಸಾಲಿನಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ವಿವಿಧ ಯೋಜನೆಗಳಲ್ಲಿ ಒಟ್ಟು 2429 ಅರ್ಜಿಗಳು ಬಂದಿರುತ್ತವೆ. ಈ ಅರ್ಜಿಗಳಲ್ಲಿ ದಿನಾಂಕ 28/02/07ರ ವರೆಗೆ 1238 ಅರ್ಜಿಗಳಿಗೆ ಮಂಜೂರಾತಿ ನೀಡಲಾಗಿದೆ.

3. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ :-

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಕಛೇರಿಯಲ್ಲಿ ಚಾಮರಾಜನಗರ ಜಿಲ್ಲೆಯ 471 ಅರ್ಜಿಗಳು ಸ್ವೀಕೃತಗೊಂಡಿವೆ.

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ :-

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2524ರ (ಆ) ಪ್ರಶ್ನೆಗೆ ಅನುಬಂಧ-1

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು 2006-07ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ.

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವನ್ನು 1977ರಂದು ಸ್ಥಾಪಿಸಲಾಗಿದೆ. ಹಿಂದುಳಿದ ವರ್ಗಗಳ ಜನರು ಸ್ವಯಂ ಉದ್ಯೋಗವನ್ನು ಕೈಗೊಳ್ಳಲು ರಿಯಾಯಿತಿ ಬಡ್ಡಿದರದಲ್ಲಿ ಸಾಲ ಸೌಲಭ್ಯವನ್ನು ಕೊಡುವುದು ಹಾಗೂ ನಿರುದ್ಯೋಗಿ ಹಿಂದುಳಿದ ವರ್ಗಗಳ ಯುವ ಜನರಿಗೆ ವೃತ್ತಿ ಕುಶಲತೆ ಅಭಿವೃದ್ಧಿಗಾಗಿ ಅಗತ್ಯವಿರುವ ತರಬೇತಿ ನೀಡುವುದು ನಿಗಮದ ಸ್ಥಾಪನೆಯ ಉದ್ದೇಶವಾಗಿರುತ್ತದೆ. ಸರ್ಕಾರವು ಒದಗಿಸುವ ಹಣದಿಂದ ನಿಗಮವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಸಂಕ್ಷಿಪ್ತ ವಿವರ ಈ ಮುಂದಿನಂತಿದೆ.

1. ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆ :-

ಬ್ಯಾಂಕುಗಳ ಸಹಯೋಗದೊಂದಿಗೆ ಸಬ್ಸಿಡಿ ಮತ್ತು ಮಾರ್ಜಿನ್ ಹಣ ಸಾಲವನ್ನು ಹಿಂದುಳಿದ ವರ್ಗಗಳ ಜನರು ಕೈಗೊಳ್ಳುವ ವ್ಯಾಪಾರ, ಕೈಗಾರಿಕೆ. ಕೃಷಿ ಮತ್ತು ಆಧಾರಿತ ಚಟುವಟಿಕೆಗಳಿಗೆ ನೀಡಲಾಗುತ್ತದೆ. ನಿಗಮದಿಂದ ಗರಿಷ್ಠ 5,000/- ರೂ.ಗಳ ಸಬ್ಸಿಡಿ, ಶೇ.20ರಷ್ಟು ಗರಿಷ್ಠ 20,000/- ರೂ.ಗಳ ಮಾರ್ಜಿನ್ ಹಣ ಸಾಲವನ್ನು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ನೀಡಲಾಗುತ್ತದೆ. ಬ್ಯಾಂಕು ಪಾಲಿನ ಸಾಲಕ್ಕೆ ಚಾಲ್ತಿಯಲ್ಲಿರುವ ಬಡ್ಡಿದರವನ್ನು ಬ್ಯಾಂಕುಗಳು ವಿಧಿಸುತ್ತವೆ.

2. ಗಂಗಾ ಕಲ್ಯಾಣ ನೀರಾವರಿ ಯೋಜನೆ :-

ಈ ಯೋಜನೆಯಲ್ಲಿ ವೈಯಕ್ತಿಕ ಮತ್ತು ಸಾಮೂಹಿಕ ಎಂಬ ಎರಡು ವಿಧಗಳಿವೆ. ವಾರ್ಷಿಕ ವರಮಾನ 22,000/- ರೂ.ಗಳ ಮಿತಿಯೊಳಗಿರುವ ಹಿಂದುಳಿದ ವರ್ಗಗಳ ಸಣ್ಣ ಮತ್ತು ಅತಿಸಣ್ಣ ರೈತರ ಒಣ ಭೂಮಿಗೆ ನೀರಾವರಿ ಕಲ್ಪಿಸುವುದಾಗಿದೆ. ಪ್ರವರ್ಗ 1 ಮತ್ತು 2ಎ ನಲ್ಲಿ ಬರುವ ಹಿಂದುಳಿದ ವರ್ಗಗಳ ರೈತರಿಗೆ ವೈಯಕ್ತಿಕ ಯೋಜನೆಯಲ್ಲಿ ಪ್ರತಿ ಕೊಳವೆ ಬಾವಿಗೆ ಘಟಕ ವೆಚ್ಚ 1.00

ಲಕ್ಷ ರೂ.ಗಳು. ಇದರಲ್ಲಿ 86,000/– ರೂ.ಅನುದಾನ ಹಾಗೂ 14,000/– ರೂ.ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲ ಕೊಡಲಾಗುತ್ತದೆ.

ಸಾಮೂಹಿಕ ಯೋಜನೆಯಲ್ಲಿ ಒಂದೇ ಕಡೆ ಕನಿಷ್ಠ 8.00 ಎಕರೆ ಜಮೀನು ಹೊಂದಿರುವ ಕನಿಷ್ಠ 3 ಮಂದಿ ಮತ್ತು ಅದಕ್ಕಿಂತ ಹೆಚ್ಚು ರೈತರು ಹೊಂದಿರುವ ಜಮೀನುಗಳಿಗೆ ಘಟಕ ವೆಚ್ಚ 2.53 ಲಕ್ಷ ರೂ.ಗಳು. ವೆಚ್ಚದಲ್ಲಿ ಕೊಳವೆ ಬಾವಿ ಕೊರೆಸಿ, ಪಂಪ್‌ಸೆಟ್ ಅಳವಡಿಸಿ, ವಿದ್ಯುದೀಕರಣ ವೆಚ್ಚವನ್ನು ಭರಿಸಲಾಗುತ್ತದೆ.

3. <u>ಶ್ರಮಶಕ್ತಿ ಯೋಜನೆ</u> :–

ಹಿಂದುಳಿದ ವರ್ಗಗಳ ಸಾಂಪ್ರದಾಯಿಕ ಕುಶಲ ಕರ್ಮಿಗಳು ಹಾಗೂ ವೃತ್ತಿಕುಲಕಸಬುದಾರರಿಗೆ ಅವರ ವೃತ್ತಿ ಕೌಶಲ್ಯತೆಯನ್ನು ಮೇಲ್ದರ್ಜೆಗೇರಿಸಲು ಅಗತ್ಯವಿರುವ ತರಬೇತಿಯನ್ನು ನೀಡಿ ಗರಿಷ್ಠ 25,000/– ರೂ.ಗಳ ಸಾಲವನ್ನು ವಾರ್ಷಿಕ ಶೇ.4 ಬಡ್ಡಿದರದಲ್ಲಿ ನೀಡಲಾಗುತ್ತಿದೆ. ಇದು ಒಂದು ನೇರ ಸಾಲ ಯೋಜನೆಯಾಗಿದ್ದು, ಇದರಲ್ಲಿ ಶೇ.25 ರಷ್ಟು ಗರಿಷ್ಠ 6250 ರೂ.ಗಳ ಬ್ಯಾಂಕ್ ಎಂಡ್ ಸಬ್ಸಿಡಿ ಕೊಡಲಾಗುವುದು. ಬಡಗಿ, ಕಮ್ಮಾರ, ಕುಂಬಾರ, ನೇಕಾರ, ಕ್ಷೌರಿಕ, ಮಡಿವಾಳ, ದರ್ಜಿ, ಶಿಲ್ಪಿ, ಚಿನಿವಾರ, ಬೆತ್ತ–ಬಿದುರು, ಜೇನು ಸಾಕಾಣಿಕೆ ಗಾಣದ ಕೆಲಸ, ಮೀನುಗಾರಿಕೆ ಇತ್ಯಾದಿ ಗುರುತಿಸಲಾದ 45 ವೃತ್ತಿಗಳಿಗೆ ಈ ಸೌಲಭ್ಯ ನೀಡಲಾಗುತ್ತದೆ.

4. <u>ವೃತ್ತಿಪರ ತರಬೇತಿ ಯೋಜನೆ</u> :–

2006–07ನೇ ಸಾಲಿನಿಂದ ಈ ಕಾರ್ಯಕ್ರಮವನ್ನು ಹಿಂದುಳಿದ ವರ್ಗಗಳ ವಿದ್ಯಾವಂತ ನಿರುದ್ಯೋಗಿ ಯುವ ಜನರು ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲ ಕಲ್ಪಿಸುವುದು ಹಾಗೂ ಉದ್ಯೋಗವನ್ನು ದೊರಕಿಸಿಕೊಳ್ಳಲು ಆಟೋ ಕ್ಯಾಡ್, ಗ್ಲಾಸ್ ವರ್ಕ್ಸ್, ಅಟೋಮೊಬೈಲ್ ಸರ್ವಿಸಿಂಗ್, ಬೇಕರಿ ತರಬೇತಿ. ಇವಲ್ಲದೆ, ಪಂಚಕರ್ಮ ಆಯುರ್ವೇದ ತರಬೇತಿ. ಪಂಪ್‌ಸೆಟ್ ಮತ್ತು ಮೋಟಾರ್ ರಿವೈಂಡಿಂಗ್, ಗೈಡ್ ತರಬೇತಿ, ಬಿದರಿ ಕ್ರಾಫ್ಟ್, ಆಹಾರ ಸಂಸ್ಕರಣೆ – (ಸಿ.ಎಫ್.ಟಿ.ಆರ್.ಐ), ಫ್ಯಾಷನ್ ಡಿಸೈನಿಂಗ್ ಮೊಬೈಲ್ ಫೋನ್ ರಿಪೇರ್, ಮೋಟಾರ್ ಡ್ರೈವಿಂಗ್ ತರಬೇತಿಯನ್ನು ನೀಡಲಾಗುತ್ತಿದೆ.

5. <u>ಅತ್ಯಂತ ಹಿಂದುಳಿದ ಅಲೆಮಾರಿ ಜನಾಂಗಗಳಿಗೆ ವಿಶೇಷ ಯೋಜನೆ</u> :-

ಹಿಂದುಳಿದ ವರ್ಗಗಳಲ್ಲಿ ಪ್ರವರ್ಗ 1ರಲ್ಲಿ ಬರುವ ತೀರ ಹಿಂದುಳಿದಿರುವ ಗೋಂದಳಿ, ಗೋಣಿಗ, ಭಾವಾಜಿ, ಬುಡಬುಡಿಕೆ, ಜೋಗಿ, ಹೆಳವೆ, ಹಾಲಕ್ಕಿ ವಕ್ಕಲ್, ಕುಶುಬಿ, ಸುಣ್ಣಗಾರ/ರಾಯರವತ್, ಹಾವಾಡಿಗ, ಹೂಗಾರ, ದೊಂಬಿದಾಸ ಇತ್ಯಾದಿ ಅಲೆ ಮಾರಿ ಜನಾಂಗದವರಿಗೆ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಗರಿಷ್ಠ 10000/- ರೂ.ಗಳ ಸಾಲ, 5000/- ರೂ.ಗಳ ಸಬ್ಸಿಡಿ ಸೇರಿ ಒಟ್ಟು 15000/- ರೂ.ಗಳ ಆರ್ಥಿಕ ನೆರವನ್ನು 2006-07ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ.

6. <u>ಭೂರಹಿತ ಕೃಷಿ/ಅಸಂಘಟಿತ ಕೂಲಿ ಕಾರ್ಮಿಕರಿಗೆ ವಿಶೇಷ ಯೋಜನೆ</u> :-

ಅಸಂಘಟಿತ ವಲಯದಲ್ಲಿ ಬರುವ ಭೂರಹಿತ ಕೃಷಿ ಕಾರ್ಮಿಕರು, ನಿರ್ಮಾಣ ಕೆಲಸಗಾರರು, ಮನೆಗೆಲಸಗಾರರು, ಜೀವನಾವಶ್ಯಕತೆಗಾಗಿ ಮತ್ತೊಬ್ಬರನ್ನು ಅವಲಂಬಿಸಿರುವುದು ಹಾಗೂ ದುಡಿಮೆಗಾಗಿ ಪ್ರದೇಶದಿಂದ ಪ್ರದೇಶಕ್ಕೆ ವಲಸೆ ಹೋಗುವುದು ಮತ್ತು ನಿರಂತರ ಕೆಲಸ ಕೊರೆಯದೆ ಅತಂತ್ರತೆಯನ್ನು ಅನುಭವಿಸುತ್ತಿರುವಂತಹ ಹಿಂದುಳಿದ ವರ್ಗಗಳ ಜನರನ್ನು ಗುರ್ತಿಸಿ ಅಂತಹವರಿಗೆ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ 20,000/- ಸಾಲ ಹಾಗೂ 5,000/- ಸಬ್ಸಿಡಿಯನ್ನು ಸೇರಿ ಒಟ್ಟು ಗರಿಷ್ಠ 23,000/- ರೂ.ಗಳ ವರೆಗೆ ನೀಡಲಾಗುತ್ತಿದೆ.

7. <u>ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ ಯೋಜನೆ</u> :-

ರಾಷ್ಟ್ರ ಮಟ್ಟದಲ್ಲಿ 1992ರಲ್ಲಿ ಸ್ಥಾಪನೆಯಾಗಿರುವ ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮವನ್ನು ಕೇಂದ್ರ ಸರ್ಕಾರವು ಸ್ಥಾಪಿಸಿರುತ್ತದೆ. ನೇರ ಅವಧಿ ಸಾಲ ಯೋಜನೆಯಲ್ಲಿ ವ್ಯವಸಾಯ, ಸೇವಾ ವಲಯ, ಸಾರಿಗೆ ವಲಯ ಹಾಗೂ ಸಣ್ಣ ವ್ಯಾಪಾರ ಕೈಗೊಳ್ಳಲು ಶೇ.6ರ ಬಡ್ಡಿದರದಲ್ಲಿ ಸಾಲವನ್ನು ನೀಡಲಾಗುತ್ತಿದೆ. ಸ್ವಯಂ ಸಕ್ಷಮಾ ಯೋಜನೆಯಲ್ಲಿ ವೃತ್ತಿಯಾಧಾರಿತ ಶಿಕ್ಷಣ ಮತ್ತು ತರಬೇತಿ ಪಡೆದವರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಶೇ.5ರ ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತಿದೆ. ಮೈಕ್ರೋ ಫೈನಾನ್ಸ್ ಯೋಜನೆಯಲ್ಲಿ ಸಣ್ಣ ಉದ್ದಿಮೆದಾರರಿಗೆ ಸ್ವ ಸಹಾಯ ಗುಂಪುಗಳ ಮುಖಾಂತರ ಶೇ.5ರ ಬಡ್ಡಿ ದರದಲ್ಲಿ

ಸಾಲ ಸೌಲಭ್ಯ ನೀಡಲಾಗುತ್ತಿದೆ. ಸ್ನಾತಕ ಮತ್ತು ಸ್ನಾತಕೋತ್ತರ/ವೃತ್ತಿಪರ/ತಾಂತ್ರಿಕ ಶಿಕ್ಷಣ ಮುಂದುವರಿಕೆಗಾಗಿ ವಿದ್ಯಾಭಿವೃದ್ಧಿ ಸಾಲವನ್ನು ವಾರ್ಷಿಕ 75,000/–ರೂ.ಗಳಂತೆ ಶೇ.4ರ ಬಡ್ಡಿದರದಲ್ಲಿ ನೀಡಲಾಗುತ್ತಿದೆ.

ಮಹಿಳೆಯರಿಗಾಗಿಯೇ ನ್ಯೂ ಸ್ವರ್ಣಿಮಾ ಯೋಜನೆ ಮತ್ತು ಮಹಿಳಾ ಸಮೃದ್ಧಿ ಯೋಜನೆಗಳಲ್ಲಿ ಸ್ವಸಹಾಯ ಗುಂಪುಗಳ/ಸ್ತ್ರೀಶಕ್ತಿ ಸಂಘಗಳ ಸದಸ್ಯರಾದ ಪ್ರತಿಯೊಬ್ಬರಿಗೆ ಘಟಕ ವೆಚ್ಚವನ್ನಾಧರಿಸಿ, ಗರಿಷ್ಠ 15,000/– ರೂ.ಗಳಂತೆ ಪ್ರತಿ ಸಂಘಕ್ಕೆ 1.00 ಲಕ್ಷ ರೂ.ಗಳವರೆಗೆ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲವನ್ನು ನೀಡಲಾಗುತ್ತಿದೆ.

8. ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಯೋಜನೆ :–

ರಾಷ್ಟ್ರ ಮಟ್ಟದಲ್ಲಿ ಅಂಗವಿಕಲರ ಅಭಿವೃದ್ಧಿಗಾಗಿ ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮವನ್ನು 24–01–1997ರಂದು ಸ್ಥಾಪಿಸಲಾಗಿದೆ. ಈ ನಿಗಮದ ಯೋಜನೆಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವನ್ನು ಚಾನಲೈಸಿಂಗ್ ಏಜೆನ್ಸಿಯಾಗಿ ನಿರ್ವಹಿಸಲು ದಿನಾಂಕ 06–06–2002 ರಂದು ರಾಜ್ಯ ಸರ್ಕಾರವು ನೇಮಿಸಿರುತ್ತದೆ. ಎಲ್ಲಾ ವರ್ಗಗಳ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳು, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಮತ್ತು ಸಾಮಾನ್ಯ ವರ್ಗಗಳಿಗೆ ಸೇರಿದ) ಅಂಗವಿಕಲರಿಗೆ ಈ ಯೋಜನೆಯಲ್ಲಿ ಸಾಲ ಸೌಲಭ್ಯವನ್ನು ನೀಡಲಾಗುತ್ತದೆ. ಈ ಯೋಜನೆಯಲ್ಲಿ ಪ್ರಸ್ತುತ, ಗರಿಷ್ಠ 35,000/– ರೂ.ಗಳಂತೆ ವಾರ್ಷಿಕ ಶೇ.5ರ ಬಡ್ಡಿ ದರದಲ್ಲಿ ಅಂಗವಿಕಲರು ಕೈಗೊಳ್ಳುವ ಯೋಜನೆಗಳಿಗೆ ಸಾಲವನ್ನು ನೀಡಲಾಗುತ್ತದೆ.

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.

ಮುಖ್ಯ ವಿಷಯ ಪ್ರಭಾ ಪುಟಗಳಲ್ಲಿ ಪ್ರಕಟವಾದ ಸಚಿವರಿಂದ (ಜಾಹೀರಾತುಗಳು) ಮೇಲೆ ಬಿದ್ದ ಗುರುತಿಸಿದ್ದ ಪ್ರಶ್ನೆ ಸಂಖ್ಯೆ 2524ಕ್ಕೆ (ಆ) ಪ್ರಶ್ನೆಗೆ ಉತ್ತರಿಸಿ ಅನುಬಂಧ-2

2006-07ನೇ ಸಾಲಿಗೆ ಸಾಧಿಸಬೇಕಾದ ಒಟ್ಟು ಗುರಿ ಮತ್ತು ಸಾಧನೆ

(ಲಕ್ಷ ರೂಪಾಯಿಗಳಲ್ಲಿ)

ಕ್ರ. ಸಂ.	ಯೋಜನೆಯ ಹೆಸರು	ಗುರಿ		ಸಾಧನೆ (28-2-07ರ ವರೆಗೆ)	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	2	3	4	7	
	ರಾಜ್ಯ ಸರ್ಕಾರದ ಯೋಜನೆಗಳು				
1	ಚೈತನ್ಯ ಯೋಜನೆ	6850	700.00	5066	645.53
2	ಅತಿ ಹಿಂದುಳಿದ ಹಾಗೂ ಅತಿ ಅಲೆಮಾರಿ ಜನಾಂಗದವರಿಗೆ ವಿಶೇಷ ಯೋಜನೆ	1000	150.00	1012	147.45
3	ಭೂರಹಿತ ಕೃಷಿ/ಅಸಂಘಟಿತ ಕೂಲಿ ಕಾರ್ಮಿಕರಿಗೆ ವಿಶೇಷ ಯೋಜನೆ	1000	150.00	1137	203.27
4	ಪ್ರಮುಖ ಕ್ಷೇತ್ರ ಯೋಜನೆ	7500	1500.00	6400	1199.21
5	ಗಂಗಾ ಕಲ್ಯಾಣ ನೀರಾವರಿ ಯೋಜನೆ	3480	2350	1635	1479.61
6	ಪೈತೃಕ ಕರಕುಶಲ ಯೋಜನೆ	1650	50.00	2089	30.15
	ರಾಷ್ಟ್ರೀಯ ವಿಮಾಮುದ ಯೋಜನೆಗಳು				
7	ಪೇರ ಅವಧಿ ಸಾಲ ಯೋಜನೆ	2170	511.25	2707	1020.26
8	ಸೂಕ್ಷ್ಮ ಸ್ವಯಂ ಉದ್ಯೋಗ	6750	488.75	6582	796.32
9	ಎಸ್.ಜೆ.ಎಸ್.ಡಿ.ಕೆ ಯೋಜನೆಗಳು	400	100.00	160	22.82
	ಒಟ್ಟು	29800	6000.00	26788	5544.62

2006-07ನೇ ಸಾಲಿನ ಜಾಮೂನಜಾಗಾರ ಜಿಲ್ಲೆಗೆ ಸಾಧಿಸಬೇಕಾದ ಗುರಿ ಮತ್ತು ಸಾಧನೆ

(ಲಕ್ಷ ರೂಪಾಯಿಗಳಲ್ಲಿ)

ಕ್ರ. ಸಂ.	ಯೋಜನೆಯ ಹೆಸರು	ಗುರಿ		ಸಾಧನೆ (28-2-07ರ ವರೆಗೆ)	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	2	3	4	7	
	ರಾಜ್ಯ ಸರ್ಕಾರದ ಯೋಜನೆಗಳು				
1	ಚೈತನ್ಯ ಯೋಜನೆ	147	17.10	145	15.94
2	ಅತಿ ಹಿಂದುಳಿದ ವರ್ಗಗಳ ಅಲೆಮಾರಿ ಜನಾಂಗದವರಿಗೆ ವಿಶೇಷ ಯೋಜನೆ	38	5.70	73	10.95
3	ಭೂರಹಿತ ಕೃಷಿ/ಅಸಂಘಟಿತ ಕೂಲಿಯುದ ಕೂಲಿ ಕಾರ್ಮಿಕರಿಗೆ ವಿಶೇಷ ಯೋಜನೆ	31	4.65	35	5.25
4	ಪ್ರಮುಖ ಕ್ಷೇತ್ರ ಯೋಜನೆ	616	122.18	502	103.25
5	ಗಂಗಾ ಕಲ್ಯಾಣ ನೀರಾವರಿ ಯೋಜನೆ	81	42.12	50	68.36
6	ಪೈತೃಕ ಕರಕುಶಲ ಯೋಜನೆ	7	0.92	69	1.96
	ರಾಷ್ಟ್ರೀಯ ವಿಮಾಮುದ ಯೋಜನೆಗಳು				
7	ಪೇರ ಅವಧಿ ಸಾಲ ಯೋಜನೆ	34	18.29	151	20.21
8	ಸೂಕ್ಷ್ಮ ಸ್ವಯಂ ಉದ್ಯೋಗ	156	18.00	153	18.28
9	ಎಸ್.ಜೆ.ಎಸ್.ಡಿ.ಕೆ ಯೋಜನೆಗಳು	10	2.50	0	0
	ಒಟ್ಟು	1127	232.46	1228	242.20